# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಫೆಬ್ರವರಿ ,3,4,2017

www.karunaduexams.com

1. ಭಾರತದಲ್ಲಿ ನೋಟ್ ಅಮಾನ್ಯೀಕರಣದ ನಂತರದ ಅಕ್ರಮ ಹಣ ಜಮಾವಣೆಯನ್ನು ಕಂಡುಹಿಡಿಯುವ ಸಲುವಾಗಿ ವೃತ್ತಿ ತೆರಿಗೆ ಇಲಾಖೆಯು ಯಾವ ಕಾರ್ಯಚರಣೆಯನ್ನು ಪ್ರಾರಂಭಿಸಿದೆ?

ಅ) ಆಪರೇಷನ್ ಟ್ರಾಕ್ ಮನಿ

ಆ) ಆಪರೇಷನ್ ಬ್ಲಾಕ್ ಮನಿ

ಇ) ಆಪರೇಷನ್ ಕ್ಲೀನ್ ಮನಿ

ಈ) ಆಪರೇಷನ್ ಕ್ಲೌಡ್ ಮನಿ

ಆಪರೇಷನ್ ಕ್ಲೀನ್ ಮನಿ

ವೃತ್ತಿ ತೆರಿಗೆ ಇಲಾಖೆಯು ಭಾರತದಲ್ಲಿ ನೋಟ್ ಅಮಾನ್ಯೀಕರಣದ ನಂತರದ ಅಕ್ರಮ ಹಣ ಜಮಾವಣೆಯನ್ನು ಕಂಡುಹಿಡಿಯುವ ಸಲುವಾಗಿ, ಅಂದರೆ ನವಂಬರ್ 9 ರಿಂದ ಡಿಸಂಬರ್ 30 ರವರೆಗಿನ ದೊಡ್ಡ ಮೊತ್ತದ ಬ್ಯಾಂಕ್ ಜಮೆಯನ್ನು ಪರೀಕ್ಷಿಸುವ ಸಲುವಾಗಿ 'ಆಪರೇಷನ್ ಕ್ಲೀನ್ ಮನಿ' ಕಾರ್ಯಚರಣೆಯನ್ನು ಪ್ರಾರಂಭಿಸಿದೆ. ಮೊದಲ ಹಂತದಲ್ಲಿ ಸುಮಾರು 18 ಲಕ್ಷ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಿದ್ದಾರೆ.

2. ರಾಜೀವ್ ಗಾಂಧಿ ರಾಷ್ಟ್ರೀಯ ವಿಮಾನಯಾನ ವಿಶ್ವವಿದ್ಯಾನಿಲಯ (RGNAU) ಯಾವ ರಾಜ್ಯದಲ್ಲಿದೆ?

ಅ) ಮಹಾರಾಷ್ಟ್ರ

ಆ) ಉತ್ತರ ಪ್ರದೇಶ

ಇ) ತೆಲಂಗಾಣ

ಈ) ಕೇರಳ

ಉತ್ತರಪ್ರದೇಶ

3. ಸೇಂಟ್ ಪೀಟರ್ಸ್ ಬರ್ಗ್ ಅಂತರರಾಷ್ಟ್ರೀಯ ಆರ್ಥಿಕ ವಿಚಾರ ವೇದಿಕೆ 2017 ರಲ್ಲಿ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿರುವ ಭಾರತೀಯ ವ್ಯಕ್ತಿ ಯಾರು?

www.karunaduexams.com

ಅ) ಸುಷ್ಮಾ ಸ್ವರಾಜ್

ಆ) ಪ್ರಣಬ್ ಮುಖರ್ಜಿ

ಇ) ನರೇಂದ್ರ ಮೋದಿ

ಈ) ಮುರಳಿಮೋಹನ್ ದಾಸ್

ನರೇಂದ್ರ ಮೋದಿ

ಸೇಂಟ್ ಪೀಟರ್ಸ್ ಬರ್ಗ್ ಅಂತರರಾಷ್ಟ್ರೀಯ ಆರ್ಥಿಕ ವಿಚಾರ ವೇದಿಕೆ 2017 ನ ಗೌರವಾನ್ವಿತ ಅತಿಥಿ ರಾಷ್ಟ್ರವಾಗಿ ಭಾರತವನ್ನು ಆಹ್ವಾನಿಸಲಾಗಿದೆ. ರಷ್ಯಾದ ಸೇಂಟ್ ಪೀಟರ್ಸ್ ಬರ್ಗ್ ನಲ್ಲಿ ಜೂನ್ 1 ರಿಂದ 3, 2017 ರವರೆಗೆ ಈ ಕಾರ್ಯಕ್ರಮ ನಡೆಯಲಿದ್ದು, ಪ್ರಧಾನಿ ಮೋದಿ ಅವರು ಅತಿಥಿಯಾಗಿ ಭಾಗವಹಿಸಲಿದ್ದಾರೆ.

4. "2017-ವಿಶ್ವ ತೇವಭೂಮಿ ದಿನ (Worlds Wetland Day)"ದ ಧ್ಯೇಯವಾಕ್ಯ ________?

ಅ) Wetlands for Better Future

ಆ) Wetlands for Disaster Risk Reduction

ಇ) Wetlands for Disaster Free Nature

ಈ) Wetlands for Sustainable World

Wetlands for Disaster Risk Reduction

ವಿಶ್ವ ತೇವಭೂಮಿ ದಿನವನ್ನು ಪ್ರತಿವರ್ಷ ಫೆಬ್ರುವರಿ 2 ರಂದು ಆಚರಿಸಲಾಗುತ್ತದೆ. ತೇವಭೂಮಿ ಸಂರಕ್ಷಣೆ ಒಪ್ಪಂದವನ್ನು ಫೆಬ್ರುವರಿ 2, 1971 ರಲ್ಲಿ ಇರಾನಿನ ರಾಮಸರ್ ನಗರದಲ್ಲಿ ಅಳವಡಿಸಿಕೊಂಡರ ಸ್ಮರಣಾರ್ಥ ಈ ದಿನದಂದು ವಿಶ್ವ ತೇವಭೂಮಿ ದಿನವನ್ನು ಆಚರಿಸಲಾಗುತ್ತದೆ. 2017 ವಿಶ್ವ ತೇವಭೂಮಿ ದಿನವನ್ನು ಈ ಬಾರಿ ಮಧ್ಯ ಪ್ರದೇಶ ಸರ್ಕಾರದ ಸಹಯೋಗದೊಂದಿಗೆ ಭೋಜ್ ತೇವಭೂಮಿ ಪ್ರದೇಶದಲ್ಲಿ ಆಚರಿಸಲಾಗುತ್ತಿದೆ. ಭೋಜ್ ತೇವಭೂಮಿ ಪ್ರದೇಶ ಭಾರತದ 26 ರಾಮಸರ್ ತೇವಭೂಮಿ ಪ್ರದೇಶಗಳಲ್ಲಿ ಒಂದಾಗಿದೆ. Wetlands for Disaster Risk Reduction ಇದು ಈ ವರ್ಷದ ಧ್ಯೇಯವಾಕ್ಯ.

5. ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ನ ನೂತನ ಸಿಇಓ ಹಾಗೂ ಎಂಡಿ ಯಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ವಿಕ್ರಂ ಲಿಮಯೆ

www.karunaduexams.com

ಆ) ವಿನೋದ್ ರೈ

ಇ) ಅಮಿತಾಭ ಚೌಧರಿ

ಈ) ಅರವಿಂದ್ ಭಟ್

ವಿಕ್ರಂ ಲಿಮಯೆ

ಐಡಿಎಫ್ ಸಿ ಬ್ಯಾಂಕಿನ ಸಿಇಓ ಆಗಿರುವ ವಿಕ್ರಂ ಲಿಮೆಯೆ ಅವರು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ನ ನೂತನ ಸಿಇಓ ಹಾಗೂ ಎಂಡಿ ಯಾಗಿ ನೇಮಕಗೊಂಡಿದ್ದಾರೆ. ಚಿತ್ರಾ ರಾಮಕೃಷ್ಣ ಅವರು ದಿಡೀರ್ ರಾಜೀನಾಮೆ ನೀಡಿದ ಕಾರಣ ಈ ಸ್ಥಾನ ತೆರವಾಗಿತ್ತು.

6. "ಭಾರತೀಯ ಕರಾವಳಿ ತೀರಾ ಪಡೆ ದಿನ (Indian Coast Guard Day)" _______ ರಂದು ಆಚರಿಸಲಾಗುತ್ತದೆ?

ಅ) ಜನವರಿ 15

ಆ) ಫೆಬ್ರುವರಿ 1

ಇ) ಫೆಬ್ರುವರಿ 2

ಈ) ಮಾರ್ಚ್ 2

ಫೆಬ್ರುವರಿ 1

ಭಾರತೀಯ ಕರಾವಳಿ ತೀರಾ ಪಡೆ ದಿನವನ್ನು ಪ್ರತಿ ವರ್ಷ ಫೆಬ್ರುವರಿ 1 ರಂದು ಆಚರಿಸಲಾಗುತ್ತದೆ. ಕರಾವಳಿ ತೀರಾ ಪಡೆಯನ್ನು ಫೆಬ್ರುವರಿ 1, 1977 ರಂದು ಸ್ಥಾಪಿಸಲಾಯಿತು. ಅದರ ಸ್ಮರಣಾರ್ಥ ಫೆಬ್ರುವರಿ 1 ರಂದು ಕರಾವಳಿ ತೀರಾ ಪಡೆ ದಿನವನ್ನು ಆಚರಿಸಲಾಗುತ್ತಿದೆ.

7. ಭಾರತೀಯ ಸೇನೆಯ ನೂತನ "ಎಂಜನಿಯರ್-ಇನ್-ಚೀಫ್" ಆಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಸುರೇಶ್ ಶರ್ಮಾ

ಆ) ಅನುಪ್ ಭಂಡಾರಿ

ಇ) ಉದಯ್ ಮೆಹ್ತಾ

ಈ) ಸಚಿನ್ ಸಿಂಗ್

ಸುರೇಶ್ ಶರ್ಮಾ

ಲೆಫ್ಟಿನೆಂಟ್ ಜನರಲ್ ಸುರೇಶ್ ಶರ್ಮಾ ಅವರು ಭಾರತೀಯ ಸೇನೆಯ ನೂತನ "ಎಂಜನಿಯರ್-ಇನ್-ಚೀಫ್" ಆಗಿ ನೇಮಕಗೊಂಡಿದ್ದಾರೆ. ಸೇನೆಯ ಎಂಜನಿಯರ್ ಸೇವೆಗಳಿಗೆ ಸಂಬಂಧಿಸಿದಂತೆ

www.karunaduexams.com

ಭೂ ಸೇನೆ, ವಾಯು ಸೇನೆ ಹಾಗೂ ನೌಕ ಸೇನೆ ಮುಖ್ಯಸ್ಥರಿಗೆ ಸಲಹೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

8. ಇತ್ತೀಚೆಗೆ ಯಾವ ರಾಜ್ಯ ಶಾಲಾ ಪರೀಕ್ಷೆಗಳಲ್ಲಿ ತೃತೀಯ ಲಿಂಗಿ ವಿಭಾಗವನ್ನು ಪರಿಚಯಿಸಿದೆ?

   ಅ) ಬಿಹಾರ

   ಆ) ರಾಜಸ್ತಾನ

   ಇ) ಕೇರಳ

   ಈ) ಮಹಾರಾಷ್ಟ್ರ

   ಬಿಹಾರ

   ಬಿಹಾರ ರಾಜ್ಯ ಸರ್ಕಾರ ಶಾಲಾ ಪರೀಕ್ಷೆಗಳಲ್ಲಿ ತೃತೀಯ ಲಿಂಗಿ ವಿಭಾಗವನ್ನು ಪರಿಚಯಿಸಿದೆ. 2014 ರಲ್ಲಿ ಸುಪ್ರೀಂ ಕೋರ್ಟ್ ಮಂಗಳಮುಖಿಯನ್ನು ತೃತೀಯ ಲಿಂಗಿಗಳೆಂದು ಪರಿಗಣಿಸುವಂತೆ ನೀಡಿದ ಆದೇಶದ ಅನ್ವಯ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

9. ಭಾರತದ "ಲಕ್ಷ್ಯ ಸೇನ್ (Lakshya Sen)" ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

   ಅ) ಕ್ರಿಕೆಟ್

   ಆ) ಬ್ಯಾಡ್ಮಿಂಟನ್

   ಇ) ಟೆನ್ನಿಸ್

   ಈ) ಗಾಲ್ಫ್

   ಬ್ಯಾಡ್ಮಿಂಟನ್

   ಲಕ್ಷ್ಯ ಸೇನ್ ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ. ಇತ್ತೀಚೆಗೆ ಬಿಡುಗಡೆಗೊಂಡ ಬ್ಯಾಡ್ಮಿಂಟನ್ ವರ್ಲ್ಡ್ ಫೆಡರೇಷನ್ ಶ್ರೇಯಾಂಕದಲ್ಲಿ ಸೇನ್ ವಿಶ್ವದ ನಂ.1 ಜೂನಿಯನ್ ಬ್ಯಾಡ್ಮಿಂಟನ್ ಆಟಗಾರರಾಗಿ ಹೊರಹೊಮ್ಮಿದ್ದಾರೆ.

10. ವಿಶ್ವ ಕ್ಯಾನ್ಸರ್ ದಿನ _____________?

   ಅ) ಫೆಬ್ರುವರಿ 1

   ಆ) ಫೆಬ್ರುವರಿ 2

   ಇ) ಫೆಬ್ರುವರಿ 3

   ಈ) ಫೆಬ್ರುವರಿ 4

   ಫೆಬ್ರುವರಿ 4

www.karunaduexams.com

ಪ್ರತಿ ವರ್ಷ ಫೆಬ್ರುವರಿ 4 ರಂದು ವಿಶ್ವ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. "ವಿ ಕೆನ್ ಐ ಕೆನ್" ಇದು ಈ ವರ್ಷ ಕ್ಯಾನ್ಸರ್ ದಿನದ ಧ್ಯೇಯವಾಕ್ಯ.

www.karunaduexams.com